KACM010012902019

Presented on : 18-06-2019
Registered on : 18-06-2019

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**S.C (SESSION CASES)/62/2019**

Complainant(PROSECUTION):
State by Koppa Police, Rep. by Public Prosecutor, CKM

**VERSUS**

Accused:
1. Doreswamy, S/o Challamuttu, 46 yrs, Labourer, R/o Hanuman Nagara, Binthravalli Vill, Koppa Taluk
2:Vital S/o Seena Poojari, 46 yrs, Labourer, R/o Kooge, Nuggi Village Koppa Taluk.
3:Devid Sachin Lobo, S/o Veleniyan Lobo, 26 yrs, Labourer, R/o Devan Estate Nuggi Village, Koppa Taluk

---------------------------------------------------------------------------

State Complainant}: Public Prosecutor,
Advocate for accused: H A THEJASWI

---------------------------------------------------------------------------

**Offence punishable under : 379, of INDIAN PENAL CODE, 86,87 of KARNATAKA FOREST ACT 1963,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

**S.C. No: 62/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಜು ಹೆಚ್.ಎ. | ಪ್ರಾ.ಸಾ.- 02 |
| ತಂದೆಯ ಹೆಸರು | : | ಅನಂತಯ್ಯ | ಚಾ.ಸಾ.- 01 |
| ವಯಸ್ಸು | : | 53 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸ ಸ್ಥಳ | : | ಅಂದಗಾರು, | |

S.C.62/2019, P.W.2

**ದಿನಾಂಕಃ 24-07-2025**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ-ಪಿ.ಪಿ.ಯವರಿಂದಃ**

1. ಈಗ್ಗೆ 5 ವರ್ಷಗಳ ಹಿಂದೆ ಅಂದರೆ 2019 ರಲ್ಲಿ ಬಿಂತ್ರವಳ್ಳಿ ಗ್ರಾಮದ ಹನುಮಾನ್ ನಗರದಲ್ಲಿ ಡಾಃಮೋಹನ್ ಶೆಟ್ಟಿರವರಿಗೆ ಸೇರಿದ ಜ್ಯೋತಿ ಫಾರ್ಮ್ ತೋಟದಲ್ಲಿ ರೈಟರ್ (ಸೂಪರ್ ವೈಸರ್) ಕೆಲಸ ಮಾಡಿಕೊಂಡಿದ್ದೆನು.

2. ದಿನಾಂಕಃ 29-01-2019 ರಂದು ರಾತ್ರಿ 11.00 ಗಂಟೆ ಸಮಯಕ್ಕೆ ನಾನು ನೀರು ಬಿಡಲು ತೋಟಕ್ಕೆ ಹೋಗಿದ್ದೆ. ತೋಟದಲ್ಲಿ ಒಂದು ಹಳೆಯ ಮನೆ ಇದ್ದು, ಒಳಗಡೆ ಲೈಟ್ ಕಾಣುತ್ತಿತ್ತು. ಸದರಿ ಮನೆಯಲ್ಲಿ ಯಾವಾಗಲೂ ಲೈಟ್ ಉರಿಯುತ್ತಿಲ್ಲದೇ ಇದ್ದುದರಿಂದ ನನಗೆ ಅನುಮಾನ ಬಂದು, ಸದರಿ ಮನೆ ಹತ್ತಿರ ಹೋಗಿ ಕಿಟಕಿಯಿಂದ ಒಳಗಡೆ ನೋಡಿದೆ. ಒಳಗಡೆ ನಮ್ಮ ತೋಟದಲ್ಲಿಯೇ ಕೆಲಸ ಮಾಡುವ ದೊರೆಸ್ವಾಮಿ ಇದ್ದ. ಆತನ ಜೊತೆ ಇನ್ನೂ ಇಬ್ಬರು ಇದ್ದರು.

3. ಅವರುಗಳು ಮರದ ತುಂಡನ್ನು ಕೆತ್ತುತ್ತಿದ್ದರು. ನನಗೆ ಭಯವಾಗಿ ಶ್ರೀನಿವಾಸ ಮತ್ತು ಕಾಂತರಾಜರವರಿಗೆ ಫೋನ್ ಮಾಡಿ ಕರೆಸಿದೆ. ಅವರುಗಳು ಬಂದ ನಂತರ ಸದರಿ ತೋಟದ ಮನೆಯ ಹತ್ತಿರ ಹೋಗಿ ಕರೆದೆವು, ಆಗ ದೊರೆಸ್ವಾಮಿ ಬಾಗಿಲು ತೆಗೆದ. ಇಬ್ಬರು ಅಲ್ಲಿಂದ ಓಡಲು ಪ್ರಯತ್ನಿಸಿದ್ದು, ಒಬ್ಬನಿಗೆ ಬಾಗಿಲು ಹೊಡೆದು ಹಣೆಗೆ ಗಾಯ ಆಯಿತು.

4. ನಾನು ಪೊಲೀಸ್ ಠಾಣೆಗೆ ಫೋನ್ ಮಾಡಿದೆ. ನಾವು ಒಳಗಡೆ ನೋಡಲಾಗಿ, 6 ಶ್ರೀಗಂಧದ ತುಂಡುಗಳು, 13 ಚಕ್ಕೆ ಪೀಸುಗಳು, ಮೂರು ಅಡಿ ಉದ್ದದ ಒಂದು ಗರಗಸ, ಒಂದು ಮಂಡಗತ್ತಿ , ಒಂದು ಹಣೆಯ ಬ್ಯಾಟರಿ, ಒಂದು ಬಿಳಿ ಪ್ಲಾಸ್ಟಿಕ್ ಕೈ ಚೀಲ

ಇದ್ದವು.

5. ಅವುಗಳ ಬಗ್ಗೆ ವಿಚಾರಿಸಿದಾಗ, ಅವುಗಳನ್ನು ಅವರುಗಳು ಪಕ್ಕದ ರಾಜೇಶ್ ರವರ ತೋಟದಿಂದ ತಂದಿದ್ದು ಎಂದು ಹೇಳಿದರು. ದೊರೆಸ್ವಾಮಿ (1 ನೇ ಆರೋಪಿ) ಜೊತೆ ಇದ್ದ ಇತರ ಇಬ್ಬರು ಯಾರು-ಯಾರು ಎಂದು ವಿಚಾರಿಸಿದಾಗ, ಒಬ್ಬ ವಿಠಲ್ ಪೂಜಾರಿ ಬಿನ್ ಸೀನಾ ಪೂಜಾರಿ (2 ನೇ ಆರೋಪಿ), ಇನ್ನೊಬ್ಬ ಡೇವಿಡ್ ಸಚಿನ್ ಲೋಬೊ ಬಿನ್ ವಿಲೇರಿಯನ್ ಲೋಬೋ (3 ನೇ ಆರೋಪಿ) ಎಂದು ತಿಳಿಯಿತು.

6. ನಂತರ ಪೊಲೀಸರು ಜೀಪಿನಲ್ಲಿ ಬಂದು ಸದರಿ ಮೂರು ಜನರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು, ಅವರೊಂದಿಗೆ ನಾನೂ ಸಹಾ ಹೋಗಿದ್ದೆ. ಠಾಣೆಯಿಂದ ಗಾಯಗೊಂಡಿದ್ದ ಡೇವಿಡ್ ಸಚಿನ್ ಲೋಬೋನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು.

7. ಪಿರ್ಯಾದನ್ನು ನಾನೇ ಖುದ್ದಾಗಿ ಬರೆದುಕೊಟ್ಟಿದ್ದೇನೆ. ಸದರಿ ಪಿರ್ಯಾದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

8. ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ದೊರೆಸ್ವಾಮಿ ಎಂದು ಗುರುತಿಸಿರುತ್ತಾರೆ ಹಾಗೂ ಈಗ ತಾನೆ ನ್ಯಾಯಾಲಯಕ್ಕೆ ಬಂದ (ಬಸ್ ಲೇಟಾಗಿದ್ದರಿಂದ) 3 ನೇ ಆರೊಪಿಯನ್ನು ನೋಡಿ ಸಾಕ್ಷಿಯು ಈತ ಡೇವಿಡ್ ಸಚಿನ್ ಲೋಬೊ ಎಂದು ಗುರುತಿಸಿರುತ್ತಾರೆ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 2 ನೇ ಆರೋಪಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಗೈರು ವಿನಾಯಿತಿ ಅರ್ಜಿಯನ್ನು ಹಾಕಿರುತ್ತಾರೆ.

9. ನಾನು ಫಿರ್ಯಾದನ್ನು ಕೊಟ್ಟಾಗ ಬೆಳಗಿನ ಜಾವ 1.30 ಗಂಟೆ ಆಗಿತ್ತು. ನಂತರ ಪೊಲೀಸರು ಸದರಿ ಮೂವರು ವ್ಯಕ್ತಿಗಳನ್ನು ಠಾಣೆಯಲ್ಲಿಯೇ

ಇರಿಸಿಕೊಂಡಿದ್ದರು, ನಾನು ನಮ್ಮ ಮನೆಗೆ ಬಂದೆ.

10. ಮರು ದಿನ ಬೆಳಿಗ್ಗೆ 7.00 ಗಂಟೆಗೆ ಪೊಲೀಸರು ನನಗೆ ಫೋನ್ ಮಾಡಿ ತೋಟದ ಮನೆಗೆ ಬರಲು ತಿಳಿಸಿದರು ಮತ್ತು ಪೊಲೀಸರು ಸದರಿ ಮೂವರು ಆರೋಪಿತರನ್ನು ತೋಟದಲ್ಲಿರುವ ಸದರಿ ಮನೆಗೆ ಕರೆದುಕೊಂಡು ಬಂದರು.

11. ಸದರಿ ಮನೆಯಲ್ಲಿದ್ದ ಮೇಲೆ ಹೇಳಿದ ವಸ್ತುಗಳಾದ 6 ಶ್ರೀಗಂಧದ ತುಂಡುಗಳು, 13 ಚಕ್ಕೆ ಪೀಸುಗಳು, ಮೂರು ಅಡಿ ಉದ್ದದ ಒಂದು ಗರಗಸ, ಒಂದು ಮಂಡಗತ್ತಿ, ಒಂದು ಹಣೆಯ ಬ್ಯಾಟರಿ, ಒಂದು ಬಿಳಿ ಪ್ಲಾಸ್ಟಿಕ್ ಕೈ ಚೀಲ -ಇವುಗಳನ್ನು ವಶಕ್ಕೆ ಪಡೆದುಕೊಂಡರು. ಆ ಸಂದರ್ಭದಲ್ಲಿ ಸದರಿ ವಸ್ತುಗಳಿಗೆ ಕ್ರಮ ಸಂ.1 , 2, 3… ರೀತ್ಯಾ ಕ್ರಮ ಸಂಖ್ಯೆ ಕೊಟ್ಟರು.

12. ಆ ಸಂದರ್ಭದಲ್ಲಿ ಚಾಸಾ-9-ಸಚಿನ್, ಚಾಸಾ-8 ಸುದೀಪ್ ಸಹಾ ಬಂದಿದ್ದರು. ಬೆಳಿಗ್ಗೆ 7.00 ರಿಂದ 8.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿದರು. 6 ಶ್ರೀಗಂಧದ ತುಂಡುಗಳನ್ನು ಈಗಾಗಲೇ ಒಟ್ಟಾಗಿ ಎಂ.ಒ. 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಆದಿನ ಇದ್ದ ತುಂಡುಗಳು ಇವೇ ತುಂಡುಗಳು ಎಂದು ಗುರುತಿಸಿರುತ್ತಾರೆ. ಅದರಂತೆ ಗರಗಸ(ಎಂ.ಒ.2), ಮಂಡಗತ್ತಿ (ಎಂ.ಒ.3), ಹಣೆ ಬ್ಯಾಟರಿ (ಎಂ.ಒ.4), ಪ್ಲಾಸ್ಟಿಕ್ ಚೀಲ (ಎಂ.ಒ.5) ಇವುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. (ಪಿ ಎಫ್ ನಂ. 16/2019, ದಿನಾಂಕಃ 30-01-2019 ರಲ್ಲಿ ನಮೂದಿಸಿದೆ).

13. ನ್ಯಾಯಾಲಯದಲ್ಲಿ ಈ ಹಾಜರುಪಡಿಸಲಾದ ಆ ದಿನ ವಶಪಡಿಸಿಕೊಂಡಿದ್ದಾರೆಂದು ಹೇಳುವ 13 ಶ್ರೀಗಂಧದ ಮರದ ಚಕ್ಕೆಗಳನ್ನು ಒಂದು ದಾರದಿಂದ ಸುತ್ತಿ ಕಟ್ಟಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಸದರಿ ಚಕ್ಕೆಗಳನ್ನೇ ಆ ದಿನ ವಶಪಡಿಸಿಕೊಂಡಿದ್ದು ಎಂದು ಹೇಳುತ್ತಾರೆ. ಸದರಿ ಚಕ್ಕೆಗಳನ್ನು ಎಣಿಸಲಾಗಿ 14 ಚಕ್ಕೆಗಳು ಇದ್ದು, ಸದರಿ ಚಕ್ಕೆಗಳನ್ನು ಮುದ್ದೆಮಾಲಾಗಿ ಗುರುತಿಸಲು ಆರೋಪಿ ಪರ

ವಕೀಲರು ತಕರಾರು ಮಾಡಿರುತ್ತಾರೆ ಕಾರಣ ಸದರಿ ಚಕ್ಕೆಗಳ ಮೇಲೆ ಪಿ.ಎಫ್.ನಂಬರ್ ನಮೂದಿಸಿಲ್ಲವೆಂದು ತಕರಾರು ಮಾಡಿರುತ್ತಾರೆ. ವಕೀಲರ ತಕರಾರಿಗೆ ಒಳಪಟ್ಟು ಸದರಿ 14 ಶ್ರೀಗಂಧದ ಮರದ ಚಕ್ಕೆಗಳನ್ನು ಎಂ.ಒ.6 ಎಂದು ಗುರುತಿಸಲಾಯಿತು. (ಪಿ ಎಫ್ ನಂ. 16/2019, ದಿನಾಂಕಃ 30-01-2019 ರಲ್ಲಿ ಕ್ರಮ ಸಂ.2 ರಲ್ಲಿ ನಮೂದಿಸಿದೆ).

14. ಸದರಿ ಚಕ್ಕೆಗಳನ್ನು ಕಟ್ಟಿರುವ ಬಂಡಲ್ ಮೇಲೆ ಇರುವ ಬಿಳಿ ಹಾಳೆಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ಗುರುತಿಸಿರುತ್ತಾರೆ.

15. ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು.

16. ನಂತರ ಅಲ್ಲಿಂದ ಅಂದರೆ ಅದೇ ದಿನದಂದು (ದಿನಾಂಕಃ 30-01-2019 ರಂದು) ಆರೋಪಿತರು ರಾಜೇಶ್ ರವರ ತೋಟಕ್ಕೆ ನಮ್ಮನ್ನು, ಪೊಲೀಸರನ್ನು ಮತ್ತು ಇಬ್ಬರು ಸಾಕ್ಷಿದಾರರಾದ ಚಾಸಾ-6 ಮತ್ತು 7 ರವರನ್ನು ಕರೆದುಕೊಂಡು ಹೋಗಿ ಶ್ರೀಗಂಧದ ಮರದ ಬಡ್ಡೆಯನ್ನು ತೋರಿಸಿ, ಇಲ್ಲೇ ನಾವು ಕಡಿದಿದ್ದು ಎಂದು ತೋರಿಸಿದರು. ಸದರಿ ತೋಟದ ಸರ್ವೆ ನಂಬರ್ ನನಗೆ ಸರಿಯಾಗಿ ಗೊತ್ತಿಲ್ಲ, ಆದರೆ 220 ಇರಬಹುದು ಎಂದು ಹೇಳುತ್ತಾರೆ.

17. ಪೊಲೀಸರು ಅಲ್ಲಿ ಚೆಕ್ಕು ಬಂದಿ ಹಾಕಿ ಮಹಜರನ್ನು ಬರೆದುಕೊಂಡರು. ಸದರಿ ಸ್ಥಳದಲ್ಲಿ ಗಂಧದ ಮರವನ್ನು ಕೊಯ್ದಿದ್ದರ ಉಪಯೋಗಕ್ಕೆ ಬರದಿರುವ ತಿರುಳು, ಕಸ-ಕಡ್ಡಿಗಳು ಇದ್ದವು. ಪುನಃ ಆರೋಪಿತರನ್ನು ಡಾಕ್ಟರ್ ರವರ ತೋಟದ ಮನೆಗೆ ಕರೆದುಕೊಂಡು ಹೋದರು.

18. ಸದರಿ ಮನೆಯಲ್ಲಿ ಇನ್ನೊಂದು ಶ್ರೀಗಂಧದ ತುಂಡು ಕಂಡು ಬಂತು ಹಾಗೂ ಚಕ್ಕೆ ಪೀಸುಗಳು ಇದ್ದವು. ಅವುಗಳನ್ನು ವಶಪಡಿಸಿಕೊಂಡು ಚೆಕ್ಕು ಬಂದಿ ಬರೆದು

ಮಹಜರ್ ಮಾಡಿದರು. ಆಗ ಸಮಯ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯಾಗಿರಬಹುದು.

19. ಸದರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು.

20. ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸುಮಾರು 5 ಅಡಿ ಉದ್ದದ ಅನುಪಯುಕ್ತ ತುಂಡನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಎಂ.ಒ. 7 ಎಂದು ಗುರುತಿಸಲಾಯಿತು. ಅನುಪಯುಕ್ತ ಶ್ರೀಗಂಧದ ಚಕ್ಕೆಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ನ್ಯಾಯಾಲಯದ ಮುಂದೆ ಸದರಿ ಚಕ್ಕೆಗಳನ್ನು ಎಣಿಸಲಾಗಿ, ಒಟ್ಟು 19 ಚಕ್ಕೆಗಳಿದ್ದು, ಅವುಗಳನ್ನು ಒಟ್ಟಾಗಿ ಎಂ.ಒ.8 ಎಂದು ಗುರುತಿಸಲಾಯಿತು(ಪಿ.ಎಫ್.ನಂ.17/2019, ದಿನಾಂಕಃ 30-01-2019 ರಲ್ಲಿ ನಮೂದಿಸಿದೆ).

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಭಾಗಶಃ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆಯನ್ನು ಮತ್ತು ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಮತ್ತು ಭಾಗಶಃ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃ ಶ್ರೀಮತಿ ವೀಣಾ-ಪಿ.ಪಿ.ಯವರಿಂದಃ</u>**

21. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ, ಸದರಿ ಫೋಟೋ ವನ್ನು ಠಾಣೆಯಲ್ಲಿ ತೆಗೆದಿದ್ದು ಎಂದು ಸೂಚಿಸಲಾಗಿದ್ದು ಸಾಕ್ಷಿಯು ಹೌದು ಎಂದು ಹೇಳಿರುತ್ತಾರೆ. ಸದರಿ ಫೋಟೋವನ್ನು ನಿಶಾನೆಯನ್ನಾಗಿ ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ಸಿಡಿ ಮತ್ತು 65-ಬಿ ಸರ್ಟಿಫಿಕೇಟ್ ಇಲ್ಲ ಎಂದು ತಕರಾರು ಮಾಡಿರುತ್ತಾರೆ. ತಕರಾರಿಗೆ ಒಳಪಟ್ಟು ಸದರಿ ಫೋಟೋವನ್ನು ನಿ.ಪಿ.4 ಎಂದು ಗುರುತಿಸಲಾಯಿತು.

22. ಸಾಕ್ಷಿಗೆ ಈಗ ಇನ್ನು 2 ಫೋಟೋಗಳನ್ನು ತೋರಿಸಿ, ಸದರಿ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.ಸದರಿ ಫೋಟೋಗಳು ರಾಜೇಶ್ ರವರ ತೋಟದಲ್ಲಿ ಮತ್ತು ಡಾಕ್ಟರ್ ರವರ ತೋಟದ ಮನೆಯಲ್ಲಿ ತೆಗೆದ ಫೋಟೋಗಳು ಎಂದು ಹೇಳಿರುತ್ತಾರೆ. ಸದರಿ ಫೋಟೋಗಳನ್ನು ನಿಶಾನೆಯನ್ನಾಗಿ ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ಸಿಡಿ ಮತ್ತು 65-ಬಿ ಸರ್ಟಿಫಿಕೇಟ್ ಇಲ್ಲ ಎಂದು ತಕರಾರು ಮಾಡಿರುತ್ತಾರೆ. ತಕರಾರಿಗೆ ಒಳಪಟ್ಟು ಸದರಿ 2 ಫೋಟೋಗಳನ್ನು ಕ್ರಮವಾಗಿ ನಿ.ಪಿ.5 ಮತ್ತು 6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಎ ಟಿ. ವಕೀಲರು ಮೂರು ಜನ ಪ್ರತ್ಯಕ್ಷ ಸಾಕ್ಷಿದಾರರ ವಿಚಾರಣೆ ಆದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-

(ರಾಜೇಶ್ವರಿ ಎನ್ ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಚ

**ದಿನಾಂಕಃ 05-12-2025 ರ ಈ ನ್ಯಾಯಾಲಯದ ಆದೇಶದ ಪ್ರಕಾರ ದಿನಾಂಕಃ 29-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀಮತಿ ವೀಣಾ-ಪಿಪಿರವರಿಂದಃ**

23. ದಿನಾಂಕಃ 30-01-2019 ರಂದು ಪೊಲೀಸರು ಕೃತ್ಯ ನಡೆದ ಸ್ಥಳ ಅಂದರೆ ಡಾಕ್ಟರ್ ರವರ ತೋಟದ ಮನೆಗೆ ಬಂದು, ಮಾಲು ಸಮೇತ (ಎಂ.ಒ.1 ರಿಂದ 6 ) ಆರೋಪಿತರನ್ನು ಜೀಪಿನಲ್ಲಿ ಕರೆದುಕೊಂಡು ಹೋದರು ಎಂದರೆ ಸರಿ.

24. ರಾಜೇಶ್ ರವರ ತೋಟದಿಂದ ಕಳ್ಳತನ ಮಾಡಿಕೊಂಡು ಬಂದು ಡಾಕ್ಟರ್ ರವರ ತೋಟದ ಮನೆಯಲ್ಲಿ ಕೆತ್ತಿ ಸಿದ್ಧಪಡಿಸುತ್ತಿರುವುದಾಗಿ ಆರೋಪಿತರು ಹೇಳಿದರು ಎಂದರೆ ಸರಿ. ಸದರಿ ಮುದ್ದೆಮಾಲುಗಳನ್ನು ಕೊಪ್ಪ ಪೊಲೀಸ್ ಠಾಣೆಯಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಂಡು ಪಂಚನಾಮೆ ಬರೆದರು ಎಂದರೆ ಸರಿ.

25. ಮುದ್ದೆಮಾಲುಗಳನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಮುದ್ದೆಮಾಲುಗಳ ಮೇಲೆ ಚೀಟಿಯನ್ನು ಅಂಟಿಸಿ, ಚೀಟಿಯ ಮೇಲೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿ. ಎಂ.ಒ.1 ಎಂದು ಗುರುತಿಸಲಾದ ಒಟ್ಟು 6 ಶ್ರೀಗಂಧದ ತುಂಡುಗಳ ಮೇಲೆ ಅಂಟಿಸಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ.

26. ಎಂ.ಒ. 2 ಎಂದು ಗುರುತಿಸಲಾದ ಗರಗಸದ ಮೇಲೆ ಸಹಾ ಅಂಟಿಸಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ.

27. ಎಂ.ಒ.3 ಎಂದು ಗುರುತಿಸಲಾದ ಕತ್ತಿಯ ಮೇಲೆ ಸಹಾ ಅಂಟಿಸಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ.

28. ಎಂ.ಒ.4 ಎಂದು ಗುರುತಿಸಲಾದ ಹಣೆ ಬ್ಯಾಟರಿಯ ಮೇಲೆ ಅಂಟಿಸಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ.

29. ಎಂ.ಒ.5 ಎಂದು ಗುರುತಿಸಲಾದ ಪ್ಲಾಸ್ಟಿಕ್ ಚೀಲದ ಮೇಲೆ ಅಂಟಿಸಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ.

30. ಎಂ.ಒ.6 ಎಂದು ಗುರುತಿಸಲಾದ ಒಟ್ಟು 13 ಶ್ರೀಗಂಧದ ಚಕ್ಕೆಗಳನ್ನು ಒಟ್ಟಿಗೆ ಕಟ್ಟಿ ಅದರ ಮೇಲೆ ಇಡಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ.

31. ಎಂ.ಒ.7 ಎಂದು ಗುರುತಿಸಲಾದ 1 ಶ್ರೀಗಂಧದ ಉದ್ದವಾದ ತುಂಡಿನ ಮೇಲೆ ಅಂಟಿಸಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮುಂದುವರಿದು ಸ್ವತಃ ನುಡಿದಿದ್ದಾರೆ ಸದರಿ ಎಂ.ಒ.7 ಎಂದು ಗುರುತಿಸಲಾದ ಶ್ರೀಗಂಧದ ಉದ್ದವಾದ ತುಂಡನ್ನು ಮರು ದಿವಸ ಪೊಲೀಸರು ಡಾಕ್ಟರ್ ರವರ ತೋಟದಲ್ಲಿ ವಶಪಡಿಸಿಕೊಂಡಿದ್ದಾರೆ ಎಂದು ಹೇಳಿರುತ್ತಾರೆ.

32. ಎಂ.ಒ.8 ಎಂದು ಗುರುತಿಸಲಾದ ಶ್ರೀಗಂಧದ ಹಸಿ ಚಕ್ಕೆಗಳನ್ನು ಒಟ್ಟಿಗೆ ಕಟ್ಟಿದ್ದು, ಅದಕ್ಕೆ ಅಂಟಿಸಲಾದ ಚೀಟಿಯ ಮೇಲೆ ಸಾಕ್ಷಿಯು ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮುಂದುವರಿದು ಸ್ವತಃ ನುಡಿದಿದ್ದಾರೆ ಸದರಿ ಎಂ.ಒ.8 ಎಂದು ಗುರುತಿಸಲಾದ ಶ್ರೀಗಂಧದ ಹಸಿ ಚಕ್ಕೆಗಳನ್ನು ಮರು ದಿವಸ ಪೊಲೀಸರು ಡಾಕ್ಟರ್ ರವರ ತೋಟದಲ್ಲಿ ವಶಪಡಿಸಿಕೊಂಡಿದ್ದಾರೆ ಎಂದು ಹೇಳಿರುತ್ತಾರೆ.

33. ಸ್ವಲ್ಪ ದಿವಸಗಳ ನಂತರ ಅಂದರೆ ದಿನಾಂಕಃ 07-03-2019 ರಂದು ಪೊಲೀಸರು ಅಮಾನತ್ತುಪಡಿಸಿಕೊಂಡ ಶ್ರೀಗಂಧದ ತುಂಡುಗಳನ್ನು ಪರೀಕ್ಷೆಗೆ ನೀಡಿ, ವರದಿ ಪಡೆದಿದ್ದು, ಒಟ್ಟು 8 ಕೆ ಜಿ ಇರುತ್ತದೆ ಹಾಗೂ ಅದರ ಮೌಲ್ಯ ರೂ.8,000/- ಗಳು ಇರುತ್ತದೆ ಎಂದು ವರದಿ ನೀಡಿರುತ್ತಾರೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನಾನು ಮುಂದುವರಿದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

34. ನಿ.ಪಿ.4 ಎಂದು ಗುರುತಿಸಲಾದ ಫೋಟೋವನ್ನು ಪೊಲೀಸ್ ಠಾಣೆಯಲ್ಲಿ ಎಂ.ಒ.1 ರಿಂದ 6 ರ ಶ್ರೀಗಂಧದ ತುಂಡುಗಳನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ತೆಗೆಯಲಾದ ಫೋಟೋ ಎಂದರೆ ಸರಿ.

35. ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ ಮೂವರು ಆರೋಪಿತರನ್ನು ನೋಡಿ ಸಾಕ್ಷಿಯು ಇದೇ ವ್ಯಕ್ತಿಗಳೆಂದು ನೋಡಿ ಗುರುತಿಸಿರುತ್ತಾರೆ.

(ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಎ.ಟಿ. ವಕೀಲರು ಪ್ರತ್ಯಕ್ಷ ಸಾಕ್ಷಿದಾರರ ವಿಚಾರಣೆ ಆದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿದ್ದರಿಂದ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-29-01-2026

(ರಾಜೇಶ್ವರಿ ಎನ್ ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಚ

Visit **ecourts.gov.in** for updates or download mobile app “**eCourts Services**” from Android or iOS